# ಚಿಕ್ಕಮಗಳೂರಿನ ಜಲಕನ್ಯೆಯರು

**ಹೆಬ್ಬೆ ಮತ್ತು ಸೂತನಬ್ಬಿಗಳನ್ನು ಈಗ ನೋಡುವುದೆಂದರೆ ಕಣ್ಣಿಗೆ ಹಬ್ಬವೋ ಹಬ್ಬ!**

■ ಕೆ.ಎಂ. ಸಂತೋಷ್‌ಕುಮಾರ್

ಪ್ರಕೃತಿಯೇ ಹಾಗೆ, ಅದೊಂದು ವಿಸ್ಮಯ ಲೋಕ. ನಿಸರ್ಗದ ಒಡಲಿನಲ್ಲಿ ಅದೆಷ್ಟು ಅಭೇದ್ಯ ರಹಸ್ಯ, ಕುತೂಹಲದ ಗಣಿ ಹುದುಗಿಸಿಟ್ಟುಕೊಂಡಿದೆಯೋ! ಅಗಾಧ ಪ್ರಾಕೃತಿಕ ಸೌಂದರ್ಯ ಅಡಗಿಸಿಕೊಂಡಿರುವ ನಿಜವಾದ ಖನಿಯಲ್ಲಿ ಪಶ್ಚಿಮಘಟ್ಟ ಸಾಲಿನಲ್ಲಿರುವ ಚಿಕ್ಕಮಗಳೂರೂ ಒಂದು ಎಂದರೆ ತಪ್ಪಲ್ಲ. ಹೆಚ್ಚು ಮಲೆನಾಡು ಪ್ರದೇಶವೇ ಆವರಿಸಿರುವ ಈ ಜಿಲ್ಲೆಗೆ 'ಕಾಫಿ ಕಣಿವೆ' ಎಂಬ ಖ್ಯಾತಿಯೂ ಇದೆ. ಇಲ್ಲಿಗೆ ಪ್ರವಾಸಿಗರು ದಟ್ಟಕಾನನ, ಗಿರಿಶಿಖರ, ವನ್ಯಜೀವಿ ಸಂಕುಲ, ಧಾರ್ಮಿಕ ಯಾತ್ರಾ ಸ್ಥಳಗಳನ್ನು ನೋಡಲಷ್ಟೇ ಬರುವುದಿಲ್ಲ, ವರ್ಷ ಪೂರ್ತಿ ಧುಮುಕುವ ಜಲಪಾತಗಳನ್ನು ಕಣ್ತುಂಬಿಕೊಂಡು ಮೈಮನ ಹಗುರಾಗಿಸಿಕೊಳ್ಳಲು ಬರುವ ಪ್ರವಾಸಿಗರು, ಚಾರಣಿಗರ ಸಂಖ್ಯೆಯೂ ಹೆಚ್ಚಿದೆ.

ಕುದುರೆಮುಖ ರಾಷ್ಟ್ರೀಯ ಉದ್ಯಾನ, ಭದ್ರಾ ಅಭಯಾರಣ್ಯ, ಬಾಬಾ ಬುಡನ್ ಗಿರಿಶ್ರೇಣಿ ಹಾಗೂ ಚಾರ್ಮಾಡಿ ವ್ಯಾಪ್ತಿಯಲ್ಲಿ ನೂರಾರು 'ಜಲ ಕನ್ಯೆಯರು' ಇದ್ದಾರೆ. ಇದು ಹೇಳಿ ಕೇಳಿ ಮಳೆಗಾಲ. ಜಿನುಗು ಮಳೆಯದೇ ಹಾಡು! ಆ ಹಾಡಿಗೆ 'ಜಲಕನ್ಯೆ'ಯರ ರುದ್ರನರ್ತನ ಪ್ರಕೃತಿಯ ಸೊಬಗಿಗೆ ಇನ್ನಷ್ಟು ಮೆರುಗು ಕೊಟ್ಟಂತೆ ಕಾಣಿಸುತ್ತದೆ. ಮಳೆಗಾಲದಲ್ಲಿ ಭೋರ್ಗರೆಯುವ, ಹಾಲ್ನೊರೆ ಉಕ್ಕಿಸುವ ಜಲರಾಶಿ ನೋಡುಗರ ಕಣ್ಣಿಗೂ ಹಬ್ಬ! ಈ ಜಲಕನ್ಯೆಯರ ಹಿರಿ ಅಕ್ಕಂದಿರಂತೆ ಇರುವ ಹೆಬ್ಬೆ ಮತ್ತು ಸೂತನಬ್ಬಿ ಜಲಪಾತಗಳು ಮಳೆಗಾಲದಲ್ಲಿ ತೋರುವ ರುದ್ರರಮಣೀಯ ದೃಶ್ಯ ನೋಡಿಯೇ ಅನುಭವಿಸಬೇಕು.

ಭದ್ರಾ ಅಭಯಾರಣ್ಯಕ್ಕೆ ಹೊಂದಿಕೊಂಡಿರುವ ಹೆಬ್ಬೆ ಜಲಪಾತ ಮತ್ತು ಕುದುರೆಮುಖ ರಾಷ್ಟ್ರೀಯ ಉದ್ಯಾನದೊಳಗಿರುವ ಸೂತನಬ್ಬಿ (ಹನುಮನಗುಂಡಿ) ಜಲಪಾತಗಳು ಪ್ರವಾಸಿಗರನ್ನು ಸದಾ ಕೈಬೀಸಿ ಕರೆಯುತ್ತವೆ.

### ಹೆಬ್ಬೆ ನೋಡಲಬ್ಬ..

ರಾಜ್ಯದ ಪ್ರಮುಖ ಜಲಪಾತಗಳಲ್ಲಿ ಹೆಬ್ಬೆ ಜಲಪಾತವೂ ಒಂದು. ಇದು ಮಲೆನಾಡಿನ ಸಿರಿಯನ್ನು ಇಮ್ಮಡಿಗೊಳಿಸಿದೆ. ತರೀಕೆರೆ ತಾಲ್ಲೂಕಿನ ತಿಗಡ ಗ್ರಾಮದಲ್ಲಿರುವ ಈ ಜಲಪಾತ ಭದ್ರಾ ಅಭಯಾರಣ್ಯಕ್ಕೆ ಹೊಂದಿಕೊಂಡಿದೆ. ಕಪ್ಪುಬಂಡೆ ಸೀಳಿಕೊಂಡು ಸುಮಾರು 168 ಮೀಟರ್ (554 ಅಡಿ) ಎತ್ತರಿಂದ ಎರಡು ಹಂತದಲ್ಲಿ ದುಮ್ಮಿಕ್ಕುತ್ತದೆ.

ಏಷ್ಯಾದ ಅತ್ಯಂತ ವಿಶಿಷ್ಟ ಶೋಲಾ ಅರಣ್ಯ ಹೊಂದಿರುವ ಶಂಕರ ಶೋಲಾ ಅರಣ್ಯದಲ್ಲಿ ಹರಿಯುವ ತೊರೆಯೇ ಹೆಬ್ಬೆ ಜಲಪಾತ ಸೃಷ್ಟಿಸುತ್ತದೆ. ಇದು ಮುಂದೆ ಭದ್ರಾ ಅಭಯಾರಣ್ಯದ ಸೋಮವಾಹಿನಿ, ತಡಬೆ ಹಳ್ಳಗಳಲ್ಲಿ ಹರಿದು ಭದ್ರಾ ನದಿ ಸೇರುತ್ತದೆ. ಬೊಗಸೆಯಲ್ಲಿ ತೆಗೆದುಕೊಂಡು ನೇರವಾಗಿ ಕುಡಿಯುವಷ್ಟು ಶುದ್ಧವಾದ ನೀರು ಇದರದ್ದು. ನೆಲದಲ್ಲಿ ಸಾಸಿವೆ ಕಾಳಿನ ಗಾತ್ರದ ಕಲ್ಲು ಕಾಣಿಸುವಷ್ಟು ಈ ನೀರು ಶುಭ್ರ, ಸ್ಫಟಿಕ. ವಾರ್ಷಿಕ ಸರಾಸರಿ 254 ಸೆ.ಮೀ. ಮಳೆ ಇಲ್ಲಿ ಬೀಳುತ್ತದೆ. ಹೆಬ್ಬೆ ಗಿರಿಯಲ್ಲಿ ಹುಟ್ಟಿ, ಚಿಕ್ಕೆಬ್ಬೆ ಮತ್ತು ದೊಡ್ಡೆಬ್ಬೆಯಾಗಿ ಎರಡು ಹಂತದಲ್ಲಿ ಹೆಬ್ಬೆ ಜಲಪಾತ ದುಮ್ಮಿಕ್ಕುತ್ತದೆ.

### ಹೋಗುವ ಮಾರ್ಗ

ಚಿಕ್ಕಮಗಳೂರು ಜಿಲ್ಲಾ ಕೇಂದ್ರದಿಂದ 58 ಕಿ.ಮೀ. ಹಾಗೂ ಕೆಮ್ಮಣ್ಣುಗುಂಡಿಯಿಂದ

